ಶ್ರೀ ಬಿ. ಹೆಚ್. ಯಂಕಾನಾಯಕ್.—ನಮ್ಮ ತಾಲ್ಲೂಕಿನಲ್ಲಿ ಒಂದೇ ಹೆಡ್ ಆಫೀಸ್ ಇರುವುದರಿಂದ ವಾರಗಟ್ಟಲೆ ನಮ್ಮ ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿ ಇರುವುದಿಲ್ಲ. ಆದುದರಿಂದ ಸೆಕ್ಷನ್ ಆಫೀಸರ್ ಆದರೆ ಮಂಡಳಿಯ ಅಧಿಕಾರಿಗಳು ಇರುತ್ತಾರೆ, ಮತ್ತು ವಿದ್ಯುಚ್ಛಕ್ತಿಯ ವ್ಯವಸ್ಥೆಯನ್ನು ಅವರು ನೋಡಿಕೊಂಡು ಹಳ್ಳಿಗರಿಗೆ ಅನುಕೂಲ ಮಾಡಿಕೊಡುತ್ತಾರೆ. ಆದುದರಿಂದ ದಯಮಾಡಿ ಮಾನ್ಯ ಸಚಿವರು ಈ ಒಂದು ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ,—ಅಲ್ಲಿರತಕ್ಕಂಥ ಸ್ಥಾವರಗಳಿಗೆ ಅತ್ಯವಶ್ಯಕವಾಗಿ, ಉಪವಿಭಾಗ, ಸೆಕ್ಷನ್ ಆಫೀಸ್ ಅವಶ್ಯಕತೆ ಕಂಡು ಬಂದರೆ. ಆದಷ್ಟು ಬೇಗ ಮಾಡಿಕೊಡೋಣ.

ರಾಜ್ಯದ ವಿವಿಧ ತಾಲ್ಲೂಕುಗಳಲ್ಲಿ ಕೈಗಾರಿಕಾ ಎಸ್ಟೇಟ್ ಸ್ಥಾಪನೆ ಮಾಡುವುದು.

೧೩೬೯. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಬಂದರಂ, ವಿಮಾನುಗಾರಿಕೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ವಿವಿಧ ತಾಲ್ಲೂಕು ಕೇಂದ್ರುಗಳಲ್ಲಿ ಕೈಗಾರಿಕಾ ಎಸ್ಟೇಟ್‌ಗಳನ್ನು ಸ್ಥಾಪಿಸಲು ಸರ್ಕಾರದವರ ಉದ್ದೇಶವೇನಾದರೂ ಇದೆಯೇ?

ಆ) ಹಾಗಿದ್ದಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಎಷ್ಟು ಕಡೆ ಕೈಗಾರಿಕಾ ಎಸ್ಟೇಟ್‌ಗಳನ್ನು ನಿರ್ಮಿಸಲಾಗಿದೆ?

ಇ) ಹೊಸದುರ್ಗ ಪಟ್ಟಣದಲ್ಲಿ ನಿರ್ಮಿಸಿರುವ ಕೈಗಾರಿಕಾ ಎಸ್ಟೇಟ್‌ಗಳಿಷ್ಟು ಹಾಗೂ ನಿರ್ಮಾಣಕ್ಕೆ ವೆಚ್ಚವಾಡಲಾದ ಮೊತ್ತವೆಷ್ಟು?

ಶ್ರೀ ಎಂ. ರಘುಪತಿ (ಬಂದರು, ವಿಮಾನುಗಾರಿಕೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳ ಸಚಿವರು) —

ಅ) ಹೌದು.

ಆ) ನಾಲ್ಕು ಸ್ಥಳಗಳಲ್ಲಿ ೧) ಚಿತ್ರದುರ್ಗ
೨) ದಾವಣಗೆರೆ
೩) ಹರಿಹರ
೪) ಹೊಸದುರ್ಗ

ಇ) ಒಟ್ಟು ೧೬ ಪೆಡ್ಡುಗಳು
೮ 'ಸಿ' ಮಾದರಿ ಶೆಡ್ಡುಗಳು
'ಡಿ' ಮಾದರಿ ಪೆಡ್ಡುಗಳ ನಿರ್ಮಾಣಕ್ಕೆ ತಗುಲಿದ ಒಟ್ಟು ವೆಚ್ಚ ರೂ. ೨೯.೧೮ ಲಕ್ಷಗಳು.

ಶ್ರೀ ಜಿ. ರಾಮದಾಸ್.—ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಕೈಗಾರಿಕಾ ಎಸ್ಟೇಟ್ ಸ್ಥಾಪನೆ ಮಾಡಿರುವ ಉದ್ದೇಶ ಏನು ಎನ್ನುವುದನ್ನು ವಿವರವಾಗಿ ಹೇಳಬೇಕಂ.

ಶ್ರೀ ಎಂ. ರಘುಪತಿ.—ಸನ್ಮಾನ್ಯ ಅಧ್ಯಕ್ಷರೇ, ಉದ್ಯಮಗಳಿಗೆ ಸಹಾಯ ಮಾಡಬೇಕೂ ಮತ್ತು ಉದ್ಯೋಗಾವಕಾಶ ಕೊಡಬೇಕೆಂದು ಈ ಎಸ್ಟೇಟ್‌ಗಳನ್ನು ಸ್ಥಾಪನೆ ಮಾಡಲಾಗಿದೆ.

ಶ್ರೀ ಜಿ. ರಾಮದಾಸ್.—ನಮ್ಮ ತಾಲ್ಲೂಕಿನಲ್ಲಿ ಸುಮಾರು ೧೬ ಕೈಗಾರಿಕಾ ಎಸ್ಟೇಟ್ ಪೆಡ್‌ಗಳನ್ನು ಕಟ್ಟಿಸಿದ್ದಾರೆ. ಇವುಗಳನ್ನು ಕಟ್ಟಿಸಿ ಸುಮಾರು ೨ ವರ್ಷವಾಯಿತು. ಅಲ್ಲಿ ಯಾರು ಕೆಲಸ ಮಾಡುತ್ತಾರೆ, ಅಲ್ಲಿ ಏನೂ ಇಲ್ಲ, ವಾಚ್‌ಮನ್ ಇಲ್ಲ, ಯಾರೂ ಬಂದಂ ಕೆಲಸ ಮಾಡುತ್ತಿಲ್ಲ. ಅವುಗಳನ್ನು ಈವರೆಗೆ ಯಾರಿಗೂ ಕೊಟ್ಟಿಲ್ಲ. ಅವುಗಳಿಗೆ ರೆಂಟ್ಸ್ ಫಿಕ್ಸ್ ಮಾಡಿಲ್ಲ. ಈ ಬಗ್ಗೆ ದಯಮಾಡಿ ತಿಳಿಸಿ

ಶ್ರೀ ಎಂ. ರಘುಪತಿ.—ರೆಂಟ್ ನಿಗದಿ ಮಾಡಿದ್ದೇವೆ. ೧೬ ಷೆಡ್‌ಗಳಲ್ಲಿ ಬರೀ ಎರಡು ಷೆಡ್‌ಗಳನ್ನು ಮಾತ್ರ ಬಾಡಿಗೆಗೆ ಕೊಡಲಾಗಿದೆ. ಇನ್ನು ೧೪ ಷೆಡ್‌ಗಳು ಬಾಡಿಗೆ ಬಂದಿಲ್ಲ. ಈ ೧೪ ಷೆಡ್‌ಗಳು ಇನ್ನೂ ಅಕ್ಯೂಪೈ ಆಗದಿರುವುದರಿಂದ ಈ ಪರಿಸ್ಥಿತಿ ಇದೆ. ಎಲ್ಲಾ ಅಕ್ಯೂಪೈ ಆದರೆ ಈ ಪರಿಸ್ಥಿತಿ ಇರುವುದಿಲ್ಲ.

ಶ್ರೀ ಜಿ. ರಾಮದಾಸ್.—ರೆಂಟ್ ಫಿಕ್ಸ್ ಮಾಡಿರುವುದು ಜಾಸ್ತಿಯಾಗಿದೆ. ಇದನ್ನು ಸ್ವಲ್ಪ ಕಡಿಮೆ ಮಾಡಬೇಕು.

ಶ್ರೀ ಎಂ. ರಘುಪತಿ.—ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಚಿಕ್ಕಮಗಳೂರಿನಲ್ಲಿ ..ಪವಿತ್ರ''ವನದ ಮೇಲ್ವಿಚಾರಣೆ

೧೯೭೬. ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಇತ್ತೀಚೆಗೆ ಉದ್ಘಾಟಿಸಿರುವ ಪವಿತ್ರ ವನವು ಸಾರ್ವಜನಿಕರಿಗೆ ಸರಿಯಾಗಿ ಉಪಯೋಗವಾಗುತ್ತಿದೆಯೇ?

ಆ) ಸದರಿ ಪವಿತ್ರವನವು ಸರಿಯಾದ ಮೇಲ್ವಿಚಾರಣೆ ಇಲ್ಲದೆ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಸಾರ್ವಜನಿಕ ಹಣದಲ್ಲಿ ಪವಿತ್ರವನವನ್ನು ಉದ್ಘಾಟಿಸುವ ಪ್ರಮೇಯ ವೇನಿತ್ತು?

ಈ) ಪ್ರಕೃತಿ ಸೌಂದರ್ಯವನ್ನು ಸವಿಯಲು ಬಂದ ಸಾರ್ವಜನಿಕರು ಪವಿತ್ರ ವನವು ಹಾಳಾಗಿರುವುದೆಂದು ದೂರು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಸಂಬಂಧಪಟ್ಟವರ ಮೇಲೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಜಿ. ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಚಿಕ್ಕಮಗಳೂರಿನಿಂದಾ ಕಡೂರಿಗೆ ಹೋಗುವ ಹೆದ್ದಾರಿಯ ಪಕ್ಕ ಸುಮಾರು ೫ ಕಿಲೋ ಮೀಟರು ದೂರದಲ್ಲಿ ಸುಂದರವಾದ ಸ್ಥಳವನ್ನು ಆಯ್ಕೆಮಾಡಿ ಪವಿತ್ರ ವನವನ್ನು ದಿನಾಂಕ ೨೬-೫-೮೭ರಲ್ಲಿ ಮಾನ್ಯ ಅರಣ್ಯ ಮಂತ್ರಿಗಳಿಂದ ಉದ್ಘಾಟಿಸಲಾಯಿತು. ಸದರಿ ಪವಿತ್ರ ವನದಲ್ಲಿ ಪುರಾತನ ಕಾಲದಿಂದಲೂ, ಪೂಜಾ ಪವಿತ್ರತೆಗೆ ಪ್ರಖ್ಯಾತವಾದ ಕೃಷ್ಣ, ಅರಳಿ, ಬೇವು, ಬಿಲ್ವಪತ್ರೆ. ಬನ್ನಿಮರ ಮಂತ್ತು ಇತರೆ ಜಾತಿಯ ಹೂ ಗಿಡಗಳಿಂದ ಹಣ್ಣು ಹಂಪಲು ಹೂವು ಬಿಡುವಂತಾ ವನವನ್ನು ನಿರ್ಮಿಸಲಾಯಿತ್ತು. ಸದರಿ ವನದಲ್ಲಿ ಪೂಜ್ಯತೆಗೆ ಯೋಗ್ಯವಾದ ಆರಳಿಕಟ್ಟೆ, ಬೃಂದಾವನ, ಮುಂತಾದವುಗಳೂ ಸಹ ಇದೆ. ಸದರಿ ವನವನ್ನು ಉದ್ಘಾಟಿಸಿದ ಮೇಲೆ ಪಕ್ಕದಲ್ಲಿಯೇ ಇರುವ ..ಕಣಿವೆ ರುದ್ರೇಶ್ವರ'' ಸ್ವಾಮಿಯ ದೇವಸ್ಥಾನವು ಒಹಳ ಪುರಾತನ ಕಾಲದ್ದಾಗಿ ಆದಕ್ಕೆ ಭಕ್ತಾಧಿಗಳು, ಬರುವ ಸಂಖ್ಯೆಯು ಬಹಳವಾಗಿ ಆದರಲ್ಲಿಯೂ ಪವಿತ್ರವನವನ್ನು ಉದ್ಘಾಟಿಸಿದ ಮೇಲೆ ಆಲ್ಲಿಗೆ ಬರುವ ವಿಹಾರಾರ್ಥಿಗಳ ಭೇಟಿಯು ದಿನೇ ದಿನೇ ಹೆಚ್ಚಾಗಿರುತ್ತದೆ. ಕಡಿದಾದ ಕಣಿವೆ, ಮಂತ್ತು ಒಂದು ಭಾಗ ಪೂರ್ತಿ ಗುಡ್ಡಗಾಡುಗಳಿಂದ ಆವೃತವಾಗಿರುವುದರಿಂದ ಸುತ್ತಮುತ್ತಲಿನ ಪ್ರಕೃತಿ ಸೌಂದರ್ಯ ಸವಿಯಲು, ಸಾರ್ವಜನಿಕರಿಗೆ ಆಕರ್ಷಣೆ ಹೊಂದಿರುತ್ತದೆ. ಪವಿತ್ರವನಕ್ಕೆ ಹೊಂದಿ ಕೊಂಡಂತೆ ದೇವರಕಾಡು ನಿಡುತೋಪು ಬೆಳೆಸಿರುತ್ತದೆ. ಆದ್ದರಿಂದ ಇದರ ಯೋಗವು ಸಮಂಜಸ ವಾಗಿದೆ.

ಆ) ಪವಿತ್ರ ವನವು ಕ್ರಮವಾಗಿ ಪೋಷಣೆ ಮಾಡಿಕೊಂಡು ಬರುತ್ತಿದೆ. ಮೇಲ್ವಿಚಾರಣೆ ಮಾಡದೆ ಹಾಳಾಗಿರುವುದಿಲ್ಲ. ಅಲ್ಲದೆ ಶಾಶ್ವತವಾಗಿ ಪವಿತ್ರ ವನಕ್ಕೆ ನೀರಿನ ಸೌಕರ್ಯವನ್ನು ಒದಗಿಸುವುದಕ್ಕೆ ೧೯೮೮ರಲ್ಲಿ ಸೂಕ್ತ ಕ್ರಮ ತೆಗೆದುಕೊಂಡಿರುತ್ತೆ. ಪವಿತ್ರ ವನದ ಪವಿತ್ರತೆಗೆ ಧಕ್ಕೆ ಬಂದಿರುವುದಿಲ್ಲ.